ಇವರು ನಿಮ್ಗೆ ಗೊತ್ತಿಲ್ಲವಾ?!' ಎಂದು ಅಚ್ಚರಿ ತೋರಿದರು. 'ನನಗೆ ಖಂಡಿತಾ ಗೊತ್ತಿಲ್ಲ ಗುರುವೇ?' ಎಂದು ದೇಶಾವರಿಯಾಗಿ ನಕ್ಕೆ. 'ಓ ಹೌದಾ! ಇವರು ಆರ್.ಜಿ. ತಿಮ್ಮಾಪುರ ಅಂತ. ಬಲು ಅಪರೂಪದ ಮನುಷ್ಯ. ಇಲ್ಲೇ ಧಾರವಾಡದವರು. ರಿಟೈರ್ಡ್ ಮೇಷ್ಟ್ರು. ಮಕ್ಕಳ ಮನಸ್ಸಲ್ಲಿ ಪರಿಸರದ ಬೆಳಕು ಹುಟ್ಟು ಹಾಕಿದವರು. ಎಳೆ ಮಕ್ಕಳಲ್ಲಿ ಪಕ್ಷಿ ಲೋಕದ ತಿಳಿವಳಿಕೆಯ ಕಾಳಜಿ ಹಿಗ್ಗಿಸಿದವರು. ಇವರ ಜೊತೆ ಇರೋ ಆ ಹುಡುಗ ಅವರ ನೇರ ಶಿಷ್ಯ. ಅವನ ಹೆಸರು ಕಿರಣ್ ಮರಾಠೆ ಅಂತ. ಈಗ ಜರ್ಮನಿಯಲ್ಲಿದ್ದಾನೆ. ಜಿಗಿಯುವ ಜೇಡಗಳ ಬಗ್ಗೆ ಬ್ರಿಟಿಷ್ ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ಪಿಎಚ್.ಡಿ ಮಾಡ್ತಿದ್ದಾನೆ. ಶಿಷ್ಯನಿಗೆ ಮಾರ್ಗದರ್ಶನ ಮಾಡೋದಕ್ಕಾಂತಾನೇ ಇವರಿಲ್ಲಿ ಬಂದಿದ್ದಾರೆ. ಇವರ ಮಗ ಗುರುಪ್ರಸಾದ್ ಅಂತ. ಆತನೀಗ ದೊಡ್ಡ ಪಕ್ಷಿತಜ್ಞ. ಅಯ್ಯೋ ಅವರ ಕಥೆ ಭಾರಿ ಇದೆ ಬನ್ನಿ. ಪರಿಚಯ ಮಾಡುಸ್ತೀನಿ' ಎಂದು ಕರೆದುಕೊಂಡು ಬಂದರು.

ನಗು ಮಾಸದ ಹಸನ್ಮುಖ ಜೀವದ ಪರಿಚಯವಾಯಿತು. ಇವರ ಶಿಷ್ಯ ಕಿರಣ್ ಮರಾಠೆ ಮೊದಲು ಮಾತು ಶುರು ಮಾಡಿ, 'ಸರ್ ಜೊತೆ ಆರನೇ ಕ್ಲಾಸಿಂದ ಶುರುವಾತು ನೋಡ್ರಿ ನನ್ನ ಬರ್ಡ್ ವಾಚಿಂಗ್ ಹಾಬಿ. ಈಗ್ ನೋಡ್ರಿ ರಿಸರ್ಚ್ ಫೀಲ್ಡಲ್ಲಿ ನಿಂತು ಕೆಲಸ ಮಾಡೋವಷ್ಟು ಶಕ್ತಿ ಬಂದದೆ. ನನ್ನಂಗ ಕಲಿತೋರು ಒಬ್ಬರಲ್ರಿ. ಲೆಕ್ಕವಿಲ್ಲ. ಇಂಥ ಚಲೋ ಗುರು ಸಿಕ್ಕಿದ್ದು ನಮ್ಮ ನಸೀಬ್ರಿ ಸರಾ!' ಎಂದನು. ಈ ಮಾತಿಗೆ ತಲೆ ಕೊಡವಿದ ತಿಮ್ಮಾಪುರ ವಿನಯದಿಂದ, 'ನಿನ್ನ ಸಾಮರ್ಥ್ಯ ಬುದ್ಧಿಶಕ್ತಿಯಿಂದ ನೀ ಗಳಿಸಿದ ಆಸ್ತಿ ಕಣೋ ತಮ್ಮಾ. ಇದರಾಗ ನನ್ನದೇನೈತಿ? ಹುಚ್ಚಾ' ಎಂದು ಸಂತನಂತೆ ನಕ್ಕರು.

ನನ್ನ ಕುತೂಹಲ ಮತ್ತಷ್ಟು ಚುರುಕಾಯಿತು. ಸಿಕ್ಕಿದ ಈ ಚಾನ್ಸ್ ಬಿಡಬಾರದೆಂದು ಅವರನ್ನು ಮಾತಿಗೆ ಎಳಕೊಂಡು ಕೂತೆ. ಇವರ ಜೀವನದ ಅನುಭವ ಹೀರಿ ಬಿಡುವ ಕೊತಕೊತ ಹೆಚ್ಚಾಯಿತು. ಗಟ್ಟಿ ನೆರಳು ಹರವಿಕೊಂಡಿದ್ದ ಮಾವಿನ ಮರದ ಕೆಳಗೆ ಕುರ್ಚಿ ಸರಿಸಿ ಅವರ ಸುತ್ತುವರೆದೆವು. ಮುಂದೆ ಅವರು ಮಾತಾಗುತ್ತಾ ಹೋದರು. ಗೆಳೆಯರಾದ ನೋಂಪಿ, ಶ್ರೀಕಾಂತ್, ಶಶಿ ಎಲ್ಲರೂ ಮಕ್ಕಳಂತೆ ಕಣ್ಣರಳಿಸಿ ಕೂತೆವು.

'ಸಲೀಂ ಆಲಿ ಎಂಬ ಪಕ್ಷಿ ಸಂತ ತೀರಿಕೊಂಡಾಗ ನಂಗೆ ನಲವತ್ತನಾಲ್ಕು ವರ್ಷ. ಹಳ್ಳಿಯೊಂದರಲ್ಲಿ ನಾನು ಇಂಗ್ಲೀಷ್ ಮೇಷ್ಟ್ರಾಗಿದ್ದೆ. ಸಲೀಂ ಆಲಿ ಬಗ್ಗೆ ಪತ್ರಿಕೆಗಳಲ್ಲಿ ಆಗ ಬಂದ ಲೇಖನಗಳನ್ನು ಓದಿದೆ. ಅಂಥ ಇಳಿ ವಯಸ್ಸಲ್ಲೂ ಆ ವ್ಯಕ್ತಿ ಇಟ್ಟುಕೊಂಡ ಹಂಬಲ, ಆಸಕ್ತಿ ನನ್ನ ಮನಸ್ಸಿಗೆ ನಾಟಿದವು. ಸಲೀಂ ಆಲಿ ಎಂಬ ಮನುಷ್ಯನ ಬಗ್ಗೆ ಪೂರಾ ತಿಳ್ಕೊಬೇಕು ಅಂತ ಆಸೆ ಶುರುವಾಯಿತು. ಅವರ 'ದ ಬುಕ್ ಆಫ್ ಇಂಡಿಯನ್ ಬರ್ಡ್ಸ್' ಪುಸ್ತಕ ತರಿಸಿಕೊಂಡೆ. ಅದರಲ್ಲಿರೋ ಪಕ್ಷಿಗಳ ವಿವರ ಓದೋದು ಅದೇ ತರಹದ ಪಕ್ಷಿಗಳ ಹುಡುಕೋದು ನನ್ನ ಜೀವನದ ಅಭ್ಯಾಸ ಮಾಡಿಕೊಂಡೆ. ನೋಡ್ತಾ ನೋಡ್ತಾ ನನ್ನ ಬದುಕಿನ ಕ್ರಮವೇ ಬದಲಾಗಿ ಹೋಯಿತು. ಕನಸಲ್ಲಿ ಮನಸಲ್ಲಿ ಪಕ್ಷಿಗಳು ಬಂದು ಗೂಡು ಮಾಡಿಕೊಂಡವು. ಛೇ ಎಂಥ ಚೆಂದದ ಬದುಕಿತ್ತು. ಇಷ್ಟು ಹತ್ರ ಬದುಕಿದ್ರೂ ಅರಿಲಾರದೆ ಹೋದೆನಲ್ಲ ಅಂತ ದುಗುಡ ಆತು'.

'ಕಷ್ಟಪಟ್ಟು ದುಡ್ಡು ಹೊಂದಿಸಿಕೊಂಡು ಒಂದು ಬೈನಾಕ್ಯುಲರ್ ಕೊಂಡೆ. ದಿನಾ ಹಿಡಕಲ್ ಡ್ಯಾಂ ಹಿನ್ನೀರಿಗೆ ವಾಕಿಂಗ್ ಹೋಗೋದು ಕಂಡ ಪಕ್ಷಿಗಳ ಗುರುತು ಹಚ್ಚಿ ಬರ್ಕೋಳೋದು ಸುರುಮಾಡಿದೆ. ನನ್ನ ಈ ತಲಬು ಕ್ಲಾಸಿನಾಗ ಶಿಷ್ಯರಿಗೆ ಹೇಳೋಕೆ ಶುರು ಮಾಡಿದೆ. ಮುಗ್ಧ ಮನಸ್ಸಿನ ಹುಡುಗರಲ್ಲಿ ಪಕ್ಷಿಗಳ ಮೇಲೆ ಇನ್ನಿಲ್ಲದ ಪ್ರೇಮ ಹುಟ್ಟಿಕೊಂಡಿತು. ಅವುಕ್ಕೊಂದು ಹೊಸ ಪ್ರಪಂಚ ಸಿಕ್ಕ ಸಡಗರ. ಶಿಷ್ಯರ ಗುಂಪು ನಾ ವಾಕಿಂಗ್ ಹೊಂಟ ಕೂಡಲೇ ನಾವು ಬತ್ತೀವಿ ಸಾರ್ ಎಂದು ಗಂಟು ಬಿದ್ದರು. ಬನ್ರಪ್ಪ ಅದ್ಕೇನಂತೆ ಎಂದು ಕರಕೊಂಡು ಹೊಂಟೆ. ಕಿಂದರಜೋಗಿ ಹಿಂದೆ ಇಲಿಮರಿಗಳು ಬಂದ್ಹಂಗೆ ಅವು ಬೆನ್ನು ಹತ್ತಿದವು. ಪ್ರಕೃತಿಗಿಂತ ದೊಡ್ಡ ಪಾಠ ಶಾಲೆ ಇನ್ಯಾವುದು ಇಲ್ಲ ಅನಿಸಿತು. ನಾ ಈಗ ನಿಮ್ಮ ಗೆಳೆಯ. ಮೇಷ್ಟ್ರಲ್ಲ ಅನ್ನೋ ಸಲುಗೆ ಅವರಿಗೆ ಇಷ್ಟ ಆತು. ಈ ಬಿಡುವು ಒಂದು ಮನೋರಂಜನೆ ಆಗಿತಂತ ಯಾರೂ ಊಹಿಸಿರಲಿಲ್ಲ. ಪೋಲಿ ಬಿದ್ದು ಉಡ್ಯಾಳರ್ಯಾಗೋರು ನನ್ನ ಹಿಂದೆ ಬಿದ್ದು ಹಿಂಗ್ ಹಾಳಾಗೋದ್ವು'.

'ಮಕ್ಕಳಲ್ಲವೇ? ಕುತೂಹಲ. ಥರಾವರಿ ಪ್ರಶ್ನೆ ಕೇಳುವುದು. ಅವೇ ತಿಳಿದ ಉತ್ತರ ಒದರಿ ನಗೋದು. ಹಂಗಲ್ಲಾ ಹಿಂಗಲೆ ಮಂಗ್ಯಾನ ಮಗನಾ! ಎಂದು